ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	:	97+98
ಸದಸ್ಯರ ಹೆಸರು	:	ಶ್ರೀ ಹೆಚ್.ಎಂ.ರೇವಣ್ಣ
ಉತ್ತರಿಸುವ ದಿನಾಂಕ	:	15/07/2019
ಉತ್ತರಿಸುವ ಸಚಿವರು	:	ಮಾನ್ಯ ಸಮಾಜ ಕಲ್ಯಾಣ ಸಚಿವರು

ಕ್ರಸ	ವಿಷಯ	ಉತ್ತರ
ಅ)	ರಾಜ್ಯದಲ್ಲಿ ಎಷ್ಟು ಹಿಂದುಳಿದ ವರ್ಗಗಳ ನವೋದಯ ಮಾದರಿ ವಸತಿ ಶಾಲೆ/ಮೊರಾರ್ಜಿ ದೇಸಾಯಿ ವಸತಿ ಶಾಲೆಗಳು ಕ್ರೈಸ್ ಅಡಿಯಲ್ಲಿ ಕಾರ್ಯನಿರ್ವಹಿಸುತ್ತಿವೆ;	ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಸಂಘದ ಅದೀನದಲ್ಲಿ 167 ಹಿಂದುಳಿದ ವರ್ಗಗಳ (ನವೋದಯ ಮಾದರಿ) ಮೊರಾರ್ಜಿ ದೇಸಾಯಿ/ಅಟಲ್ ಬಿಹಾರಿ ವಾಜಪೇಯಿ/ಇಂದಿರಾ ಗಾಂಧಿ ವಸತಿ ಶಾಲೆ ಮತ್ತು ಕಾಲೇಜುಗಳು ಕಾರ್ಯನಿರ್ವಹಿಸುತ್ತಿವೆ.
ಆ)	2018–19ನೇ ಸಾಲಿನಲ್ಲಿ ಸದರಿ ಶಾಲೆಗಳಿಗೆ ಸಕಾಲದಲ್ಲಿ ಸಮವಸ್ತ್ರ ಪಠ್ಯಪುಸ್ತಕ, ಲೇಖನ ಸಾಮಗ್ರಿ, ಹಾಸಿಗೆ ಹೊದಿಕೆ ಇತ್ಯಾದಿ ಅಗತ್ಯ ವಸ್ತುಗಳನ್ನು ಜುಲೈ 2019ರೊಳಗೆ ಪೂರೈಸಲಾಗಿದೆಯೇ;	1) **ಪಠ್ಯಪುಸ್ತಕ:** ಪಠ್ಯ ಪುಸ್ತಕ ಪೂರೈಕೆಗೆ ಮೇ 2018 ರಲ್ಲಿ ವಸತಿ ಶಾಲೆ/ಕಾಲೇಜುಗಳಿಗೆ ಅನುದಾನ ಬಿಡುಗಡೆ ಮಾಡಲಾಗಿದ್ದು, ಪಠ್ಯಪುಸ್ತಕಗಳನ್ನು ಕ್ಷೇತ್ರ ಶಿಕ್ಷಣಾಧಿಕಾರಿಗಳ ಮೂಲಕ ಸ್ಥಳೀಯವಾಗಿ ಖರೀದಿಸಿ, ಪೂರೈಕೆಗೆ ಕ್ರಮವಹಿಸಲಾಗಿದೆ.
ಇ)	ಇಲ್ಲದಿದ್ದಲ್ಲಿ, ಕಾರಣಗಳೇನು?(ವಿವರ ನೀಡುವುದು)	2) **ಶುಚಿ ಸಂಭ್ರಮ ಕಿಟ್:** ವಸತಿ ಶಾಲಾ/ಕಾಲೇಜುಗಳಿಗೆ ಶುಚಿ ಸಂಭ್ರಮ ಕಿಟ್‌ಗಳನ್ನು ಜುಲೈ 2019ರೊಳಗೆ ಪೂರೈಕೆ ಮಾಡಲಾಗಿದೆ. 3) **ಸಮವಸ್ತ್ರ:** ವಸತಿ ಶಾಲಾ/ಕಾಲೇಜುಗಳಿಗೆ ಸಮವಸ್ತ್ರಗಳನ್ನು ಜನವರಿ 2019ರಲ್ಲಿ ಪೂರೈಕೆ ಮಾಡಲಾಗಿದೆ. 4) **ಲೇಖನ ಸಾಮಗ್ರಿ:** ವಸತಿ ಶಾಲಾ/ಕಾಲೇಜುಗಳಿಗೆ ನೋಟ್ ಪುಸ್ತಕ ಮತ್ತು ಲೇಖನ ಸಾಮಗ್ರಿಗಳನ್ನು ಮಾರ್ಚ್ 2019 ರ ಮಾಹೆಯಲ್ಲಿ ಪೂರೈಕೆ ಮಾಡಲಾಗಿದೆ. 5) **ಹಾಸಿಗೆ ಹೊದಿಕೆ: 2018–19ನೇ** ಸಾಲಿನಲ್ಲಿ ಬೇಡಿಕೆಯಿರುವ ವಸತಿ ಶಾಲಾ/ಕಾಲೇಜುಗಳಿಗೆ 54000 ಹಾಸಿಗೆ ಮತ್ತು 58000 ದಿಂಬುಗಳನ್ನು ಸರಬರಾಜು ಮಾಡಲಾಗಿರುತ್ತದೆ. 6) **2018–19ನೇ** ಸಾಲಿನಲ್ಲಿ ವಸತಿ ಶಾಲಾ/ಕಾಲೇಜುಗಳಿಗೆ ಪೀಠೋಪಕರಣಗಳನ್ನು ಒದಗಿಸಲು ಟೆಂಡರ್ ಕರೆಯಲಾಗಿತ್ತು. ಸದರಿ ಟೆಂಡರ್ ಪ್ರಕ್ರಿಯೆ ವಿರುದ್ಧ ಮಾನ್ಯ ಉಚ್ಚ ನ್ಯಾಯಾಲಯದಲ್ಲಿ ಧಾವೆಯಿದ್ದುದರಿಂದ ನಿಗಧಿತ ಸಮಯದಲ್ಲಿ ಸರಬರಾಜು ಮಾಡಲು ವಿಳಂಬವಗಿರುತ್ತದೆ.

		7) ವಸತಿ ಶಾಲಾ/ಕಾಲೇಜುಗಳ ಅಗತ್ಯ ನಿರ್ವಹಣೆಗಾಗಿ ಸ್ವಂತ ಕಟ್ಟಡ ಹೊಂದಿರುವ ವಸತಿ ಶಾಲಾ/ಕಾಲೇಜುಗಳಿಗೆ ವಾರ್ಷಿಕ ರೂ. 1.00 ಲಕ್ಷಗಳನ್ನು ಹಾಗೂ ಬಾಡಿಗೆ ಕಟ್ಟಡ ಹೊಂದಿರುವ ವಸತಿ ಶಾಲಾ/ಕಾಲೇಜುಗಳಿಗೆ ರೂ. 50000 ಗಳನ್ನು ಬಿಡುಗಡೆಗೊಳಿಸಲಾಗಿದೆ. ಈ ಮೇಲ್ಕಂಡ ಕ್ರ.ಸಂ. (01) ರಿಂದ (06) ರವರೆಗಿನ ಮೂಲಭೂತ ಸೌಕರ್ಯಗಳನ್ನು ಈಗಾಗಲೇ ಪೂರೈಸಲಾಗಿದೆ.

ಸಕಇ 86 ಮೊದೇಶಾ 2019

(ಪ್ರಿಯಾಂಕ್ ಖರ್ಗೆ)
ಸಮಾಜ ಕಲ್ಯಾಣ ಸಚಿವರು